# ಅರಣ್ಯಾಧಿಕಾರಿಗಳಿಗೆ ಹನಗೋಡು ರೋಟರಿಯಿಂದ ಸನ್ಮಾನ

▪ **ವಿಕ ಸುದ್ದಿಲೋಕ ಹುಣಸೂರು**

ತಾಲೂಕಿನ ಹನಗೋಡು ರೋಟರಿ ಸಂಸ್ಥೆ ವತಿಯಿಂದ ವನ್ಯಜೀವಿ ಸಪ್ತಾಹದ ಅಂಗವಾಗಿ ವೀರನಹೊಸಹಳ್ಳಿಯ ಅರಣ್ಯಾಧಿಕಾರಿಗಳನ್ನು ಅಭಿನಂದಿಸಲಾಯಿತು.

ನಾಗರಹೊಳೆ ಉದ್ಯಾನದ ಹೆಬ್ಬಾಗಿಲು ವೀರನಹೊಸಹಳ್ಳಿ ವಲಯಾರಣ್ಯಾಧಿಕಾರಿಗಳ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರೋಟರಿ ಸಂಸ್ಥೆ ನೀಡಿದ ಸನ್ಮಾನ ಸ್ವೀಕರಿಸಿದ ವಲಯ ಅರಣ್ಯಾಧಿಕಾರಿ ಟಿ.ಎಂ.ರವೀಂದ್ರ ಮಾತನಾಡಿ, ನಾಗರಹೊಳೆ ಉದ್ಯಾನವು ಹುಲಿ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದೆ. ಆನೆಗಳ ಸಂತತಿಯೂ ಹೆಚ್ಚಿದೆ. ಅಪರೂಪದ ಪ್ರಾಣಿಗಳು ಇಲ್ಲಿವೆ. ಇಲ್ಲಿ ಕೆಲಸ ಮಾಡುವುದೇ ಒಂದು ಹೆಮ್ಮೆ, ಸಾಕಷ್ಟು ಸವಾಲುಗಳು ಕೂಡ ಇವೆ. ಇಂತಹ ಉದ್ಯಾನ, ವನ್ಯಜೀವಿ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕಿದೆ. ಇಂತಹ ಪ್ರೋತ್ಸಾಹವು ಮತ್ತಷ್ಟು ಕೆಲಸ ಮಾಡಲು ಪ್ರೇರಣೆ ನೀಡಲಿದೆ ಎಂದರು.

ರೋಟರಿ ಅಧ್ಯಕ್ಷ ಕಿರಂಗೂರು ಬಸವರಾಜ್ ನೇತೃತ್ವದಲ್ಲಿ ಆರ್.ಎಫ್.ಒ. ರವೀಂದ್ರ, ಡಿ.ಆರ್.ಎಫ್.ಒ.ಗಳಾದ ಚಂದ್ರೇಶ್, ನವೀನ್ ಕುಮಾರ್, ದ್ವಾರಕನಾಥ್ ಅವರನ್ನು ಸನ್ಮಾನಿಸಿ, ಅರಣ್ಯದಿಂದಾಗಿಯೇ ನಾವೆಲ್ಲಾ ಉತ್ತಮ ಜೀವನ ನಡೆಸಲು ಸಾಧ್ಯವಾಗಿದೆ. ಮಾನವ-ವನ್ಯಜೀವಿ ಸಂಘರ್ಷಗಳ ನಡುವೆ ನಿಮ್ಮಗಳ ಸೇವೆ ಅನನ್ಯವಾದುದೆಂದು ಪ್ರಶಂಸಿದರು. ಈ ವೇಳೆ ರೋಟರಿ ಸಂಸ್ಥೆಯ ಪದಾಧಿಕಾರಿಗಳಾದ ಛಾಯಾಮಣಿ, ಅಶ್ರಫ್, ವೆಂಕಟಪ್ಪ, ಗಣಪತಿ, ಶ್ರೀಧರ್, ಪೂಜಾ ಶಿವನಂಜು, ಮಂಜುಳ ಇದ್ದರು.




ಹನಗೋಡು ರೋಟರಿ ಸಂಸ್ಥೆಯು ವನ್ಯಜೀವಿ ಸಪ್ತಾಹದ ಅಂಗವಾಗಿ ವೀರನಹೊಸಹಳ್ಳಿ ವಲಯದ ಅರಣ್ಯ ಅಧಿಕಾರಿಗಳಿಗೆ ಸನ್ಮಾನಿಸಿದರು. ಅಧ್ಯಕ್ಷ ಬಸವರಾಜು ಇತರೆ ಪದಾಧಿಕಾರಿಗಳಿದ್ದರು.

CamScanner

# ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನ




**ಹನಗೋಡು:** 66ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಹನಗೋಡು ರೋಟರಿ ಸಂಸ್ಥೆ ವತಿಯಿಂದ ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ನಾಗರಹೊಳೆ ರಾಷ್ಟ್ರೀಯಾ ಉದ್ಯಾನವನದ ವೀರನಹೊಸಹಳ್ಳಿ ವಲಯದ ವಲಯಾಧಿಕಾರಿಗಳ ಕಛೇರಿಯಲ್ಲಿ ಹನಗೋಡು ರೋಟರಿ ಸಂಸ್ಥೆ ಅಧ್ಯಕ್ಷ ಕಿರಂಗೂರು ಬಸವರಾಜ್ ನೇತೃತ್ವದ ತಂಡ ಅರಣ್ಯಧಿ ಕಾರಿ ಟಿ.ಎಂ.ರವೀಂದ್ರ, ಡಿ.ಆರ್‌ಎಫ್‌ಒಗಳಾದ ಚಂದ್ರೇಶ್, ದ್ವಾರಕನಾಥ್, ನವೀನ್‌ಕುಮಾರ್ ರವ ರನ್ನು ಸನ್ಮಾನಿಸಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ವನ್ಯ ಪ್ರಾಣಿಗಳ ಸ್ವೇಚ್ಛೆಗೆ ಧಕ್ಕೆ ಬಾರದಂತೆ, ಪರಿಸರ ಹಾಗೂ ವನ್ಯಜೀವಿಗಳನ್ನು ಕಾಪಾಡುವುದರೊಂದಿಗೆ ಕಾಡಂಚಿನ ಜನರ ನಡುವೆ ಸಮನ್ವಯತೆ ಕಾಪಾಡುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿರುವುದು ಹೆಮ್ಮೆಯಾಗಿದೆ. ಇಂತಹ ವ್ಯಕ್ತಿಗಳನ್ನು ಸಮಾಜ ಗುರುತಿಸಿ ಗೌರವಿಸುವ ಕೆಲಸವಾಗಬೇಕು ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪಧಾಧಿಕಾರಿಗಳಾದ ವೆಂಕಟಪ್ಪ, ಆಶ್ರಕ್, ಗಣಪತಿ, ಶ್ರೀಧರ್,ಮಂಜುಳ, ಛಾಯಾಮಣಿ,ಪೂಜಾ ಸೇರಿದಂತೆ ಇತರರು ಹಾಜರಿದ್ದರು.

ವೀರನಹೊಸಹಳ್ಳಿ ವಲಯದ ಅರಣ್ಯ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ಹುಣಸೂರು: ತಾಲೂಕಿನ ಹನಗೋಡು ರೋಟರಿ ಸಂಸ್ಥೆ ವತಿಯಿಂದ 66ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯವನ್ನು ಜತನದಿಂದ ಕಾಯುತ್ತಿರುವ ಅಧಿಕಾರಿ-ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ನಾಗರಹೊಳೆ ಉದ್ಯಾನವನದ ವೀರನಹೊಸಹಳ್ಳಿ ವಲಯದ ವಲಯಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ, ಆರ್‌ಎಫ್‌ಒ ರವೀಂದ್ರ, ಡಿಆರ್‌ಎಫ್‌ಒಗಳಾದ ಚಂದ್ರೇಶ್, ದ್ವಾರಕನಾಥ್, ನವೀನ್‌ಕುಮಾರ್ ಮತ್ತಿರರನ್ನು ಸನ್ಮಾನಿಸಲಾಯಿತು.

ಈ ವೇಳೆ ಹನಗೋಡು ರೋಟರಿ ಸಂಸ್ಥೆ ಅಧ್ಯಕ್ಷ ಕಿರಂಗೂರು ಬಸವರಾಜ್, ಸಂಸ್ಥೆಯ ಪದಾಧಿಕಾರಿಗಳಾದ ವೆಂಕಟಪ್ಪ, ಛಾಯಾಮಣಿ, ಆಶ್ರಕ್, ಗಣಪತಿ, ಶ್ರೀಧರ್, ಮಂಜುಳಾ, ಪೂಜಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

CS Scanned with CamScanner